ಎಂವಿಸಿ ನಂಃ 214-2024 ಪಿ ಡಬ್ಲ್ಯೂ-1
ದಿಃ 23-1-2026 ಸಾಕ್ಷಿಯನ್ನುಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಬಿಕೆ ವಕೀಲರಿಂದಃ</u>

ದ್ವಿಚಕ್ರ ವಾಹನವೂ ನನ್ನ ತಮ್ಮನಿಗೆ ಸೇರಿತ್ತು. ಸುಮನ್ ನನ್ನ ತಮ್ಮ. ಘಟನೆಯಾದ ದಿನ ವಾಹನವನ್ನು ನಾನೇ ಚಾಲನೆ ಮಾಡುತ್ತಿದ್ದೆನು. ನನ್ನ ಬಳಿ ವಾಹನ ಚಲಾಯಿಸಲು ಪರವಾನಗಿ ಇದೆ ಅದನ್ನು ಮನೆಯಲ್ಲಿಟ್ಟಿದ್ದೇನೆ. ನನ್ನ ದ್ವಿ ಚಕ್ರ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ದ್ವಿ ಚಕ್ರ ವಾಹನಕ್ಕೆ ಅರ್ಹತಾ ಪತ್ರ (ಎಫ್ .ಸಿ) ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ಉಂಟು ಮಾಡಿದ ಚಾಲಕನ ಹೆಸರಾಗಲೀ ಹಾಗೂ ವಾಹನದ ಸಂಖ್ಯೆಯಾಗಲೀ ನನಗೆ ಗೊತ್ತಿಲ್ಲ. ನಮ್ಮ ಅಣ್ಣ ರೆಡ್ಡಪ್ಪ ಅಪಘಾತದ ಬಗ್ಗೆ ಪೊಲೀಸರಿಗೆ ದೂರನ್ನು ನೀಡಿರುತ್ತಾರೆ. ಪೊಲೀಸರು ನನ್ನನ್ನು ಗೌರವ್ ಆಸ್ಪತ್ರೆಯಲ್ಲಿ ವಿಚಾರಣೆ ಮಾಡಿದರು. ಅಪಘಾತವನ್ನು ಉಂಟು ಮಾಡಿದ ವಾಹನದ ಸಂಖ್ಯೆಯನ್ನು ನನ್ನ ತಮ್ಮ ಪೊಲೀಸರಿಗೆ ತಿಳಿಸಿರುತ್ತಾನೆ. ನನ್ನ ತಮ್ಮ ದ್ವಿ ಚಕ್ರ ವಾಹನದಲ್ಲಿ ಹಿಂಬದಿ ಸವಾರನಾಗಿದ್ದನು. ಎದುರುದಾರರ ವಾಹನವೂ ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ವಾಹನಕ್ಕೆ ಡಿಕ್ಕಿ ಮಾಡಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಪಾದಚಾರಿಯ ರಸ್ತೆಯ ಪಕ್ಕ ಜಲ್ಲಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಕಾರು ಬಂದು ಡಿಕ್ಕಿ ಹೊಡೆದಿದೆ. ಕಾರಿನ ಚಾಲಕನ ಅಜಾಗರೂಕತೆಯಿಂದ ಅಪಘಾತ ಆಗಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಬಲಗಾಲಿನ ಮೂಳೆ ಮುರಿತವಾಗಿದೆ. ಅದಕ್ಕೆ ಶಸ್ತ್ರಚಿಕಿತ್ಸೆ ಆಗಿದೆ. ಡಾಃ ಇಮ್ರಾನ ರವರು ನನಗೆ ಚಿಕಿತ್ಸೆ ನೀಡಿಲ್ಲ. ನಾನು 1 ವರ್ಷದ ಹಿಂದೆ ಕಡೆಯ ಬಾರಿಗೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದೆನು. ಕಡೆಯ ಬಾರಿ ಆಸ್ಪತ್ರೆಗೆ ಹೋದಾಗ ವೈದ್ಯರು ಮೂಳೆ ಕೂಡಿಕೊಂಡಿಲ್ಲ ಎಂದು ಹೇಳಿರುತ್ತಾರೆ, ಪುನಃ ಶಸ್ತ್ರಚಿಕಿತ್ಸೆ ಆಗಬೇಕು ಎಂದು ಹೇಳಿದ್ದಾರೆ. ನನಗೆ ಕಾಲಿನಲ್ಲಿ ರಾಡ್ ಹಾಕಿರುವುದರಿಂದ ಓಡಾಡಲು ತೊಂದರೆ ಇದೆ. ವೈದ್ಯರು ನನಗೆ 3 ವರ್ಷಗಳ ಕಾಲ ಭಾರ ಎತ್ತಬಾರದು ಎಂದು ಹೇಳಿರುತ್ತಾರೆ. ಔಷದೋಪಚಾರಗಳಿಗೆ ಸುಮಾರು 3 ಲಕ್ಷ ರೂ ಹಣ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕೂಲಿ ಹಾಗೂ ಪೈಂಟರ್ ಕೆಲಸ ಮಾಡುತ್ತಿದ್ದೇನೆ. ಈಗ ನಾನು ಯಾವುದೇ ಕೆಲಸ ಮಾಡುತ್ತಿಲ್ಲ ಮನೆಯಲ್ಲಿದ್ದೇನೆ. ನನ್ನ ಕೆಲಸ ಹಾಗೂ ಆದಾಯದ ಬಗ್ಗೆ ಯಾವುದೇ ದಾಖಲೆ ನೀಡಿಲ್ಲ. ನಾನು ಮಾಲೀಕರ ಕೆಳಗೆ ಕೆಲಸ ಮಾಡುತ್ತಿದ್ದೆನು. ಪೊಲೀಸರೊಂದಿಗೆ ಶಾಮೀಲಾಗಿ ಕಾರು ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ದಾಖಲೆಗಳನ್ನು ಬನಾವಟ್ಟು ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಸಹಿ/-

(ಬಿ. ಎಸ್.ಜಯಶ್ರೀ)

1 ನೇ ಅಪರ ಸತ್ರ ನ್ಯಾಯಾಧೀಶರು, ಕೋಲಾರ.